ಶ್ರೀ ಸಿದ್ದರಾಮಯ್ಯ:– ಅದರ ಬಗ್ಗೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳಿ.

ಅಧ್ಯಕ್ಷರು:– ರಾಜೇಶ್ ಹೆಚ್.ಪಿ. ಇಲ್ಲ, ಶ್ರೀ ಜಿ.ಹೆಚ್. ತಿಪ್ಪಾರೆಡ್ಡಿ.

ಹಟ್ಟಿ ಚಿನ್ನದ ಗಣಿ

174 (2983); ಶ್ರೀ ತಿಪ್ಪಾರೆಡ್ಡಿ ಜಿ.ಎಚ್. (ಚಿತ್ರದುರ್ಗ)

ಅ) ಚಿತ್ರದುರ್ಗ ಜಿಲ್ಲೆಯಲ್ಲಿರುವ ಹಟ್ಟಿ ಚಿನ್ನದ ಗಣಿ ಘಟಕ ಲಾಭದಾಯಕವಾಗಿದ್ದರೂ ಸಹ 15 ವರ್ಷಗಳಿಂದ ಮುಚ್ಚಲಾಗಿದ್ದು, ಈ ಘಟಕದಲ್ಲಿ ಕೆಲಸ ಮಾಡುವ ಕಾರ್ಮಿಕರ ಕುಟುಂಬಗಳು ಬೀದಿ ಪಾಲಾಗಿದ್ದು, ಸದರಿ ಘಟಕವನ್ನು ಪುನಃ ಪ್ರಾರಂಭಿಸಲಾಗುವುದೇ;

ಆ) ಪುನಃ ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಾಗುವುದು? (ಸಂಪೂರ್ಣ ಮಾಹಿತಿ ನೀಡುವುದು)

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯ ಮಂತ್ರಿಗಳು)

ಅ) ಚಿತ್ರದುರ್ಗ ಜಿಲ್ಲೆಯಲ್ಲಿ ಇರುವ ಹಟ್ಟಿ ಚಿನ್ನದ ಗಣಿ ಘಟಕದ ವ್ಯಾಪ್ತಿಯಲ್ಲಿ ಚಿತ್ರದುರ್ಗ ಜಿಲ್ಲೆ, ಇಂಗಳದಾಳ ಗ್ರಾಮದ ಉತ್ತರ ಬ್ಲಾಕ್ ಮತ್ತು ಕೇಂದ್ರ ಬ್ಲಾಕ್‌ನ 2 ತಾಮ್ರದ ಗಣಿಗಳು ಹಾಗೂ ತುಮಕೂರು ಜಿಲ್ಲೆ ಅಜ್ಜನಹಳ್ಳಿ ಚಿನ್ನದ ಗಣಿ ಮತ್ತು ಒಂದು ಸಂಸ್ಕರಣಾ ಘಟಕ (Metallurgical Unit) ಇರುತ್ತದೆ.

ತಾಮ್ರದ ಬೆಲೆ ಕುಸಿತದಿಂದಾಗಿ ಇಂಗಳದಾಳದ ತಾಮ್ರ ಗಣಿಯು 1993–94ನೇ ಸಾಲಿನಲ್ಲಿ ಸ್ಥಗಿತಗೊಂಡಿದ್ದು, ತದನಂತರ 2002ನೇ ಸಾಲಿನ ವರೆಗೆ ಅಜ್ಜನಹಳ್ಳಿಯ ಚಿನ್ನದ ಗಣಿಯಿಂದ ಅದಿರನ್ನು ತಂದು ಇಂಗಳದಾಳದಲ್ಲಿನ ಘಟಕದಲ್ಲಿ ಸಂಸ್ಕರಣೆ ಮಾಡಲಾಗುತ್ತಿತ್ತು.

ಅಜ್ಜನಹಳ್ಳಿ ಚಿನ್ನದ ಗಣಿ ಗಣಿಗಾರಿಕೆಯು ಲಾಭದಾಯಕವಾಗಿಲ್ಲದ್ದ ಕಾರಣ 2002 ರಲ್ಲಿ ಗಣಿಗಾರಿಕೆ ಮತ್ತು ಸಂಸ್ಕರಣೆಯನ್ನು ಸ್ಥಗಿತಗೊಳಿಸಲಾಯಿತು.

ಈ ಗಣಿಯಲ್ಲಿ ಕೆಲಸ ಮಾಡುತ್ತಿದ್ದ 504 ಸಂಖ್ಯೆಯ ಅಧಿಕಾರಿ/ಕಾರ್ಮಿಕರಿಗೆ ಸ್ವಯಂ ನಿವೃತ್ತಿ ಯೋಜನೆ ಅಡಿಯಲ್ಲಿ ಹಣಕಾಸಿನ ನೆರವನ್ನು ನೀಡಲಾಗಿರುತ್ತದೆ.

ಹಟ್ಟಿ ಚಿನ್ನದ ಗಣಿ ಸಂಸ್ಥೆಯು ಗಣಿಗಾರಿಕೆ ಪುನರ್ ಪ್ರಾರಂಭಿಸುವ ಬಗ್ಗೆ ಆರ್ಥಿಕ ಕಾರ್ಯಸಾಧ್ಯತೆ ಕುರಿತು ಪರಿಶೀಲನೆ ನಡೆಸುತ್ತಿದ್ದು, ಲಾಭದಾಯಕ ಎಂಬುದಾಗಿ ಕಂಡುಬಂದಲ್ಲಿ ಈ ಬಗ್ಗೆ ತೀರ್ಮಾನಿಸಲಾಗುವುದು.

ಆ) ಪ್ರಸ್ತುತ ಗಣಿ ಪುನರ್ ಪ್ರಾರಂಭಿಸುವ ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ. ಆದಾಗ್ಯೂ, ಗಣಿ ಗುತ್ತಿಗೆಗೆ ಅವಶ್ಯವಿರುವ ಶಾಸನಬದ್ಧ ಅನುಮತಿಗಳನ್ನು ಪಡೆಯುವ ಪ್ರಕ್ರಿಯೆ ಜಾರಿಯಲ್ಲಿದ್ದು, ಆರ್ಥಿಕವಾಗಿ ಲಾಭದಾಯಕ ಎಂಬುದಾಗಿ ಕಂಡುಬಂದಲ್ಲಿ ಗಣಿ ಪುನರ್ ಪ್ರಾರಂಭಿಸುವ ಬಗ್ಗೆ ಕ್ರಮ ವಹಿಸಲಾಗುವುದು.

ಶ್ರೀ ಜೆ.ಹೆಚ್. ತಿಪ್ಪಾರೆಡ್ಡಿ:– ಮಾನ್ಯ ಅಧ್ಯಕ್ಷರೆ, ಉತ್ತರ ಒದಗಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಹಿಂದೆ 1994–96ರಲ್ಲಿ Finance Minister ಆಗಿದ್ದಾಗ ಮಾನ್ಯ ದೇವೇಗೌಡರು ಮುಖ್ಯಮಂತ್ರಿಯಾಗಿದ್ದರು, ಮಾನ್ಯ ದೇಶಪಾಂಡೆಯವರು Industries Minister ಆದಾಗ ಚಿನ್ನವನ್ನು ತೆಗೆಯತಕ್ಕಂತಹ ಕೆಲಸವನ್ನು ಪ್ರಾರಂಭ ಮಾಡಿದರು. ಸ್ವಲ್ಪ ದಿವಸ ಆದ ಮೇಲೆ ಅದು ವಯಬಲ್ ಅಲ್ಲ ಎಂದು ನಿಂತು ಹೋಗಿರತಕ್ಕಂತಹ ವಿಚಾರ ಸುಮಾರು 500 ರಿಂದ 600 ಎಸ್‌ಟಿ. ಜನಾಂಗಕ್ಕೆ ಸೇರಿದವರು ಅಲ್ಲಿ ಕೆಲಸ ಮಾಡತಕ್ಕಂತಹ ಒಂದು ಯೂನಿಟ್ ಇದೆ. ಈಗ M.D. ಅವರ ಹತ್ತಿರ

ನಾನು ಮಾತನಾಡಿದ್ದೇನೆ, ಅದು ವಯಬಲ್, ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ.

ಅಧ್ಯಕ್ಷರು:– ಉತ್ತರ ಹೇಳಿದ್ದಾರಲ್ಲ.

ಶ್ರೀ ಜಿ.ಹೆಚ್. ತಿಪ್ಪಾರೆಡ್ಡಿ:– ಸುಮಾರು 400 ರಿಂದ 500 ಮನೆಗಳು ಅಲ್ಲಿ ಖಾಲಿ ಇವೆ. ಮೆಷಿನರಿ ಎಲ್ಲ ಇದೆ. ಪರ್ಮಿಷನ್ ತೆಗೆದುಕೊಂಡು ಪ್ರಾರಂಭ ಮಾಡಿದರೆ ಸುಮಾರು ನಾಲ್ಕೈದು ಹಳ್ಳಿಗಳಲ್ಲಿ ಬರೀ ST ಜನಾಂಗದವರು ಇರತಕ್ಕಂತಹ ಜಾಗ viable also ಎಂದು ನಮ್ಮ M.D. ಯವರು ಹೇಳಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಅದನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ:– ಸುಮಾರು 10–15 ವರ್ಷಗಳಿಂದ ಅದನ್ನು ಮುಚ್ಚಿ ಬಿಟ್ಟಿದ್ದಾರೆ. ಈಗ ನಾವು ಮತ್ತೆ ಅದನ್ನು ರಿವೈವ್ ಮಾಡುವುದಕ್ಕಾಗುತ್ತದಾ ಎಂದು ಪರಿಶೀಲನೆ ಮಾಡುತ್ತಿದ್ದೇವೆ. ಅದು ವಯಬಲ್ ಆದರೆ ಮಾಡುತ್ತೇವೆ.

ಅಧ್ಯಕ್ಷರು:– ಇನ್ನೊಬ್ಬ ಮದಕರಿನಾಯಕನನ್ನು ಅಲ್ಲಿ ಹುಡುಕಿ.

ಶ್ರೀ ಜಿ.ಹೆಚ್. ತಿಪ್ಪಾರೆಡ್ಡಿ:– ಎಂ.ಡಿ. ಯವರು ಅದು ವಯಬಲ್ ಇದೆ ಎಂದು ಹೇಳಿದ್ದಾರೆ.

ಶ್ರೀ ಸಿದ್ದರಾಮಯ್ಯ:– ವಯಬಲ್ ಆದರೂ ಮಾಡುತ್ತೇವೆ. Examine ಮಾಡುತ್ತಿದ್ದಾರೆ.

ಅಧ್ಯಕ್ಷರು:– ಹೇಳಿದ್ದಾರೆ. ಪ್ರಕ್ರಿಯೆ ಜಾರಿಯಲ್ಲಿದೆ. ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ ಆದಾಗ್ಯೂ ಗಣಿ ಗುತ್ತಿಗೆಗೆ ಅವಶ್ಯವಿರುವ ಶಾಸನಬದ್ಧ ಅನುಮತಿಗಳನ್ನು ಪಡೆಯುವ ಪ್ರಕ್ರಿಯೆ ಜಾರಿಯಲ್ಲಿದ್ದು, ಆರ್ಥಿಕವಾಗಿ ಲಾಭದಾಯಕ ಎಂಬುದಾಗಿ ಕಂಡುಬಂದಲ್ಲಿ ಗಣಿ ಪ್ರಾರಂಭಿಸುವ ಬಗ್ಗೆ ಕ್ರಮ ವಹಿಸಲಾಗುವುದು ಎಂದಿದ್ದಾರಲ್ಲ.

ಶ್ರೀ ಜಿ.ಹೆಚ್. ತಿಪ್ಪಾರೆಡ್ಡಿ:– ನಮ್ಮ ಜಿಲ್ಲೆಗೆ in charge ಮದಕರಿನಾಯಕನಂತಹವರು ಯಾರೂ ಇಲ್ಲ. ಸಧ್ಯಕ್ಕೆ ನಮ್ಮ ಜಿಲ್ಲೆಗೆ ಮದಕರಿನಾಯಕನಂತಹ ಮಂತ್ರಿಗಳು ಇಲ್ಲವೆಂದು ಹೇಳಿದೆ.

ಅಧ್ಯಕ್ಷರು:– ಇನ್ನೂ ಒಂದು ಕುಟುಂಬ ಅಲ್ಲಿಯೇ ಇದೆ. ಡಾ॥ ಅಜಯ್ ಸಿಂಗ್.

ಜೇವರ್ಗಿ ತಾಲ್ಲೂಕಿಗೆ ಟ್ರಾಫಿಕ್ ಪೊಲೀಸ್ ಠಾಣೆ

175 (3135); ಡಾ॥ ಅಜಯ್ ಸಿಂಗ್ (ಜೇವರ್ಗಿ)

ಅ) ಜೇವರ್ಗಿ ತಾಲ್ಲೂಕಿನಲ್ಲಿ 2 ರಾಷ್ಟ್ರೀಯ ಹೆದ್ದಾರಿ ಹಾದು ಹೋಗುತ್ತಿರುವ ಸ್ಥಳದಲ್ಲಿ ಅಪಘಾತ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ತಾಲ್ಲೂಕಿಗೆ ಸಂಚಾರಿ ಪೊಲೀಸ್ ಠಾಣೆ ಮಂಜೂರಾತಿ ಮಾಡಿ ಅಪಘಾತಗಳನ್ನು ತಡೆಯಲು ಸರ್ಕಾರ ತೆಗೆದುಕೊಂಡ ಕ್ರಮವೇನು;

ಇ) ಹಾಗಿದ್ದಲ್ಲಿ, ಸಂಚಾರಿ ಪೊಲೀಸ್ ಠಾಣೆ ಮಂಜೂರಾತಿ ಮಾಡಲು ಬೇಕಾಗುವ ಅವಧಿ ಎಷ್ಟು?

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು)

ಅ) ಹೌದು.

ಆ) ಜೇವರ್ಗಿ ಠಾಣಾ ವ್ಯಾಪ್ತಿಯಲ್ಲಿ ಅಪಘಾತ ಪ್ರಕರಣಗಳು ಈ ಕೆಳಗಿನಂತೆ ವರದಿಯಾಗಿರುತ್ತದೆ.